**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ, ಉಡುಪಿ**

ಸ್ಪೆಷಲ್ ಕೇಸ್ ನಂಃ 29/2020 ಪಿ.ಡಬ್ಲ್ಯುಃ 6

ಸಿ.ಡಬ್ಲ್ಯುಃ 11

| | |
|---|---|
| ಸಾಕ್ಷಿದಾರರ ಹೆಸರು | ಸೀತಾರಾಮ ಪಿ. |
| ತಂದೆಯ ಹೆಸರು | ಪಂಜು ಪೂಜಾರಿ |
| ವಯಸ್ಸು | 46 ವರ್ಷ |
| ಉದ್ಯೋಗ | ಪೊಲೀಸ್ ನಿರೀಕ್ಷಕರು ,ಕರಾವಳಿ ಕಾವಲು ಪೊಲೀಸ್ ಪಡೆ, ಮಲ್ಪೆ |
| ವಿಳಾಸ | ಮಲ್ಪೆ |

ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 10-01-2018 ರಿಂದ 20-06-2020 ರವರೆಗೆ ಉಡುಪಿಯ CEN ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ. ನನ್ನ ಕಾರ್ಯ ವ್ಯಾಪ್ತಿಯಲ್ಲಿ ಇಡೀ ಉಡುಪಿ ಜಿಲ್ಲೆ ಬರುತ್ತಿತ್ತು.

2) ದಿನಾಂಕ 19-09-2018 ರಂದು ರಂದು ಸೆನ್ ಠಾಣೆಯ ಗುನ್ನೆ ನಂಬ್ರ 80/2018 ರ ಕಡತವನ್ನು ಚಾಸಾ - 1 ಇವರಿಂದ ಪಡೆದು, ಪರಿಶೀಲಿಸಿದ್ದೆ. ದಿನಾಂಕ 02-10-2018 ರಂದು 7 ನೇ ಆರೋಪಿಯ ಮೊಬೈಲ್ ನ್ನು ನ್ಯಾಯಾಲಯದ ಆದೇಶದಂತೆ ಆತನಿಗೆ ಹಸ್ತಾಂತರಿಸಿದೆ. ದಿನಾಂಕ 04-10-2018 ರಂದು 1 ನೇ ಆರೋಪಿಯ ಮೊಬೈಲ್ ನ್ನು ನ್ಯಾಯಾಲಯದ ಆದೇಶದಂತೆ ಆತನಿಗೆ ಹಸ್ತಾಂತರಿಸಿದ್ದೆ. ಸದರಿ ಎರಡು ಮೊಬೈಲ್ ಪೋನ್ ಗಳ ಪೋಟೋಗಳನ್ನು ಈಗಾಗಲೇ ನಿಪಿ-6 ಎಂದು ಗುರುತಿಸಿದೆ.

3)ದಿನಾಂಕ 26-10-2018 ರಂದು ಜಿಲ್ಲಾ ಪೊಲೀಸ್ ಕಚೇರಿಯಿಂದ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಗಾಂಜಾವನ್ನು ನಾಶಪಡಿಸಿದ್ದ ಬಗ್ಗೆ ನಡಾವಳಿಯನ್ನು

ದಿನಾಂಕ 22-11-2018 ರಂದು ನ್ಯಾಯಾಲಯಕ್ಕೆ ನಿವೇದಿಸಿದ್ದೆ. ಆ ವರದಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-28** ಎಂದು ಗುರುತಿಸಿದ್ದೇನೆ. ದಿಃ 16-01-2020 ರಂದು ನಿಪಿ-25 ರ ವರದಿ ಪಡೆದಿದ್ದೆ. ದಿಃ 06-09-2018 ರ ಠಾಣಾ ದಿನಚರಿಯ ಭಾಗವನ್ನು, ದೃಢೀಕೃತ ನಕಲು ಮಾಡಿಕೊಂಡು, ಕಡತಕ್ಕೆ ಅಳವಡಿಸಿಕೊಂಡಿದ್ದೆ. ಸದರಿ ದಾಖಲೆಯನ್ನು **ನಿಶಾನೆ ಪಿ-29** ಎಂದು ಗುರುತಿಸಿದ್ದೇನೆ. ದಿಃ 16-01-2020 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಎ.ಆರ್.ಆರ್ ವಕೀಲರಿಂದ**

1) ನಾನು ಪಡೆದುಕೊಂಡಿರುವ ನಿಪಿ-25 ರ ವರದಿ ತಪ್ಪಾಗಿದೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆಯನ್ನು ಮಾಡದೇ ತಪ್ಪು ತನಿಖಾ ವರದಿ ಬರೆದಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.